ದಿ: **05-08-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ** ಪಾಟೀ **ಸವಾಲು : ಪ್ರತಿವಾದಿಗಳ ಪರ ವಕೀಲರಾದ ಶ್ರೀ ಕೆ. ಶ್ರೀನಿವಾಸ್ ಐತಾಳ್ ರವರಿಂದ**

**4)** ನಿ.ಪಿ-1 ಸಾಮಾನ್ಯ ಮುಕ್ತಾರು ಪತ್ರವನ್ನು ಬರೆಯಲು ನನ್ನ ಅಣ್ಣನಾದ ಡಿ.ಎಸ್ ಸತ್ಯನಾರಾಯಣ ಮಾಹಿತಿ ನೀಡಿರುತ್ತಾರೆ. ಡಿ.ಎಸ್ ಸತ್ಯನಾರಾಯಣರವರು ಕುಂದಾಪುರಕ್ಕೆ ಬಂದು ದಾವೆ ಸಲ್ಲಿಸಲು ಮತ್ತು ಸಾಕ್ಷಿ ನೀಡಲು ಆರೋಗ್ಯ ಸಮಸ್ಯೆ ಇಲ್ಲ ಎಂದರೆ ಸರಿಯಲ್ಲ.

5) ದಾವಾ ಆಸ್ತಿಯು ಕೋಟೇಶ್ವರ ಗ್ರಾಮದಲ್ಲಿ ಹಾದುಹೋಗುವ ರಾಷ್ಟ್ರಿಯ ಹೆದ್ದಾರಿಯ ಪೂರ್ವ ದಿಕ್ಕಿನಲ್ಲಿ ಇರುತ್ತದೆ. ದಾವಾ ಆಸ್ತಿಯ ಮೌಲ್ಯ ಪ್ರತಿ ಸೆಂಟಿಗೆ ರೂ.6,00,000/- ಇದೆ ಎಂದರೆ ಸರಿಯಲ್ಲ. ಸರ್ಕಾರ ನಿರ್ದೇಶಿತ ಮಾರುಕಟ್ಟೆ ಮೌಲ್ಯದ ಪ್ರಕಾರ ದಾವಾ ಆಸ್ತಿಯ ಬೆಲೆ ರೂ.6,00,000/- ಇದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಶುಲ್ಕವನ್ನು ಕಡಿಮೆ ಕಟ್ಟುವ ಉದ್ದೇಶದಿಂದ ದಾವಾ ಆಸ್ತಿಯ ಮಾರುಕಟ್ಟೆ ಮೌಲ್ಯವನ್ನು ಕಡಿಮೆ ತೋರಿಸಿದ್ದೇನೆ ಎಂದರೆ ಸರಿಯಲ್ಲ.

6) ನಿ.ಪಿ - 7 ನೊಂದಾಯಿತ ವ್ಯವಸ್ಥಾ ಪತ್ರದ ಪ್ರಕಾರ ದಾವೆಯನ್ನು ಕಾಲಮಿತಿಯ ಒಳಗೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿಯ ಸ್ವಾಧೀನದಲ್ಲಿದೆ ಮತ್ತು ನಮ್ಮ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ನಾವು ಯಾವುದೇ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯ ಮೇಲೆ ಹಕ್ಕು ಇಲ್ಲದೇ ಇರುವುದರಿಂದ ಪಹಣಿ ಪತ್ರಿಕೆಯನ್ನು ಅವರ ಹೆಸರಿಗೆ ದಾಖಲು ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ.

7) 1942ರ ಸಾಲಿನಲ್ಲಿ ನನ್ನ ಅಜ್ಜನಾದ ಪುಟ್ಟರಾಯರವರು ಸರ್ವೆ ನಂಬ್ರ 296/8ರ 00-20 ಸೆಂಟ್ಸ್ ಅಳತೆಯ ಜಾಗವನ್ನು ಅಣ್ಣಾಜಿಯವರಿಗೆ ವಿಲುನಾಮೆ ಮುಖಾಂತರ ನೀಡಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಅಣ್ಣಾಜಿಯ ಮರಣದ ನಂತರ ಅವರ ವಾರಸುದಾರರು ಐದು ಕ್ರಯ ಪತ್ರಗಳ ಮುಖಾಂತರ ದಿನಾಂಕ 31-10-1987ರಂದು ಐದು ಜನರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಮ್ಮ ಅಜ್ಜ ಮಾಡಿದ್ದ ವಿಲುನಾಮೆ ಜಾರಿಗೆ ಬಂದಿದೆ ಎಂದರೆ ಸರಿಯಲ್ಲ. ನಿ.ಪಿ - 7 ಜಾರಿಗೆ ಬಂದಿಲ್ಲ ಎಂದರೆ ಸರಿಯಲ್ಲ.

8) ಪ್ರತಿವಾದಿಗಳ ಕುಟುಂಬದಲ್ಲಿ 1918ರಲ್ಲಿ ಒಂದು ವಿಭಾಗಪತ್ರವಾಗಿದೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗಪತ್ರದ ಒಬ್ಬ ಪಕ್ಷಗಾರನಾದ ದೇವಪಯ್ಯನವರು ತಮಗೆ ಬಂದಿದ್ದ ಸರ್ವೆ ನಂಬ್ರ

296/8ರಲ್ಲಿನ 00-75 ಸೆಂಟ್ಸ್ ಆಸ್ತಿಯನ್ನು ರಾಮಕೃಷ್ಣಯ್ಯ ಎನ್ನುವವರಿಗೆ 1930ನೇ ಸಾಲಿನಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕುಂದಾಪುರದ ಮುನ್ಸಿಫ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 238/1936ರಲ್ಲಿ ಆದ ಡಿಕ್ರಿಯ ಪ್ರಕಾರ ಸಲ್ಲಿಸಿದ ಅಮಲ್ಜಾರಿ ಅರ್ಜಿ REP ಸಂಖ್ಯೆ 788/1938ರಲ್ಲಿ ಆದ ಸರ್ವೆ ನಂಬ್ರ 296/8 ರ 03-12 ಎಕರೆಯ ಹರಾಜಿನಲ್ಲಿ ಅದರ 1/4ನೇ ಅಂಶವನ್ನು ರಾಮಕೃಷ್ಣಯ್ಯನವರನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ಜಾಗ ನಮ್ಮ ಆಸ್ತಿಯ ದಕ್ಷಿಣ ದಿಕ್ಕಿಗೆ ಇದೆ ಎನ್ನುತ್ತಾರೆ. ಸದರಿ ಹರಾಜಿನ ಪ್ರಕಾರ ನ್ಯಾಯಾಲಯ ಮಾರಾಟ ಪ್ರಮಾಣಪತ್ರ ನೀಡಿದ್ದಾರೆ ಎಂದರೆ ಸರಿ. ನ್ಯಾಯಾಲಯದ ಲೀಲಾವು ಮತ್ತು ಖರೀದಿಯ ಪ್ರಕಾರ ರಾಮಕೃಷ್ಣಯ್ಯನವರ ಹೆಸರಿಗೆ ಸರ್ವೆ ನಂಬ್ರ 296/8ರ ಜಮೀನಿನ ಖಾತೆ ದಾಖಲಾಗಿದೆ ಎಂದರೆ ಸರಿ.

9) ಡಿ.ಎಸ್.ಗೋಪಾಲ ರಾವ್‌ರವರು ನನಗೆ ಸಂಬಂಧಿಕರು. ಡಿ.ಎಸ್.ಗೋಪಾಲ ರಾವ್ ಮತ್ತು ಇತರರ ವಿರುದ್ಧ ವೈ. ಜನಾರ್ಧನಯ್ಯನವರು ಅಸಲು ದಾವಾ ಸಂಖ್ಯೆ 375/1974ನ್ನು ಸರ್ವೆ ನಂಬ್ರ 296/8ರ 00-77 ಸೆಂಟ್ಸಿನ ಸ್ವಾಧೀನಕ್ಕೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಡಿಕ್ರಿಯಾಗಿದೆ ಮತ್ತು ಡಿಕ್ರಿ ಪ್ರಕಾರ ವೈ.ಜನಾರ್ಧನಯ್ಯನವರು ಸದರಿ ಜಮೀನಿನ ಸ್ವಾಧೀನಕ್ಕೆ ಆದೇಶವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಅಮಲ್ಜಾರಿ ಅರ್ಜಿ ಸಲ್ಲಿಸಿ ಸ್ವಾಧೀನ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿಯ ಪ್ರಕಾರ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

10) ದಿನಾಂಕ 10-09-2012ರಲ್ಲಿ ರಮಾಮಣಿ ಶೆಟ್ಟಿಯವರು ಪ್ರತಿವಾದಿಯಾದ ತಾಯಿಯಾದ ವಿಶಾಲಾಕ್ಷಮ್ಮ ಮತ್ತು ವಾದಿಯ ವಿರುದ್ಧ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ RRTSR/103/2008-09 ನ್ನು ಸರ್ವೆ ನಂಬ್ರ 296/8-CP4ರ 00-05 ಸೆಂಟ್ಸ್, ಸರ್ವೆ ನಂಬ್ರ 296/8-CP5ರ 00-10 ಸೆಂಟ್ಸ್, ಸರ್ವೆ ನಂಬ್ರ 296/8-CP6ರ 00-10 ಸೆಂಟ್ಸ್, ಸರ್ವೆ ನಂಬ್ರ 296/8-CP2ರ 00-06-50 ಸೆಂಟ್ಸ್ ಮತ್ತು ಸರ್ವೆ ನಂಬ್ರ 296/8-CP3 00-05 ಸೆಂಟ್ಸ್ ಗೆ ಸಂಬಂಧಿಸಿದಂತೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯನ್ನು ಎ.ಸಿ ನ್ಯಾಯಾಲಯ ವಜಾ ಮಾಡಿದೆ ಎಂದರೆ ಸರಿ. ದಾವಾ ಆಸ್ತಿಯ ಮೇಲೆ ನಮಗೆ ಹಕ್ಕಿಲ್ಲದೇ ಇರುವ ವಿಚಾರ ಎ.ಸಿ ನ್ಯಾಯಾಲಯ ಆದೇಶ ಮಾಡಿದ ಸಂದರ್ಭದಲ್ಲೇ ನಮಗೆ ತಿಳಿದಿತ್ತು ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ಧ ನಾವು ಮೇಲ್ಮನವಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ದಾವೆಯನ್ನು ಕಾಲಮಿತಿ ಮುಗಿದ

ನಂತರ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕಿಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**